ಅಧ್ಯಯನವೇ ಮಹಿಳಾ ಸಂಕಥನದ ಪ್ರಾತಿನಿಧಿಕ ಮೈಲಿಗಲ್ಲುಗಳನ್ನು ಸೂಚಿಸಬಲ್ಲದು ಎಂದೂ ಅನ್ನಿಸುತ್ತದೆ. ಅದೆಷ್ಟು ವೈವಿಧ್ಯಮಯವಾದ ಚಿತ್ರಗಳಿವೆ ಎಂದರೆ, ನನಗೆ ಅನೇಕ ಸಲ, ಹೆಣ್ಣು ತನ್ನ ಸಾಧ್ಯತೆಗಳನ್ನೆಲ್ಲ ಈ ಸಾವಿರಾರು ಸೀತೆಯರನ್ನು ಕಲ್ಪಿಸಿ, ಕಾಣಿಸಿ, ಹಂಬಲಿಸಿದ್ದಾರೇನೋ ಅನ್ನಿಸುತ್ತದೆ. ಈ ಮಾತನ್ನು ಜನಪದ ಕಾವ್ಯದಲ್ಲಿ, ಆ ಮಾತಾಯಿ ಸೀತೆಗೇ ಇಂಥ ಕಷ್ಟ ಬಂದ ಮ್ಯಾಗೆ ನಮ್ಮದಿನ್ನೇನು ತೆಗಿ ಎಂದು ಸೀತೆಯನ್ನು ಧೈರ್ಯದ ಊರುಗೋಲಾಗಿಯೂ, ಹೆಣ್ಣಿನ ಅವಸ್ಥೆಯನ್ನು ಒಪ್ಪಿಕೊಳ್ಳುವ ವಾಸ್ತವದ ಮಾದರಿಯಾಗಿಯೂ ನೋಡುವ ಉದಾಹರಣೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಹೇಳುತ್ತಿಲ್ಲ. ಸೀತೆಯ ಪಾತ್ರದ ಸಾಧ್ಯತೆಗಳು, ಅದರ ತೆರೆದ ಅಂಚು **(open endedness)** ಅಸಾಧಾರಣ ಎನ್ನುವ ನನ್ನ ನಂಬಿಕೆ ದಿನಕಳೆದಂತೆ ಹೆಚ್ಚಾಗುತ್ತಲೇ ಇದೆ. ವಿಪರ್ಯಾಸದಂತೆ ಕಾಣಿಸುವ ವಿರುದ್ಧ ಧ್ರುವಗಳ ಸಾಧ್ಯತೆ ಮತ್ತು ಶಕ್ತಿ ಸೀತೆಯ ಪಾತ್ರಕ್ಕಿದೆ. ದೇಶ ಕಾಲಾತೀತವಾಗಿ ಸೀತೆಯ ಪಾತ್ರ ಮತ್ತೆ ಮತ್ತೆ ನಮ್ಮನ್ನು ಕಾಡುತ್ತಿರುವುದು ಇದೇ ಕಾರಣಕ್ಕಿರಬೇಕು.

ಸ್ತ್ರೀವಾದಿ ನೆಲೆಯಲ್ಲಿ ಇದನ್ನು ಹೀಗೂ ಹೇಳಬಹುದು. ಯಾವ ಸತ್ಯವನ್ನು ನೀವು ಮುಚ್ಚಿಡಲು ಪ್ರಯತ್ನಿಸುತ್ತೀರೋ ಆ ಸತ್ಯ ಬೇರೊಂದು ರೂಪದಲ್ಲಿ ನಿಮ್ಮೆದುರಿಗೆ ಕಾಣಿಸಿಕೊಳ್ಳುತ್ತಲೇ ಇರುತ್ತದೆ. ಆ ಅರಿವಿನಿಂದಲೇ, ಅದನ್ನು ಇನ್ನೂ ಇನ್ನೂ ಆಳಕ್ಕೆ ಹುಗಿಯುವ ಅಥವಾ ಅದನ್ನು ರೂಪಾಂತರಿಸುವ ಪ್ರಯತ್ನವೂ ಇನ್ನೂ ತೀವ್ರವಾಗುತ್ತಾ ಹೋಗುತ್ತದೆ. ನಮ್ಮ ಚಾರಿತ್ರಿಕ, ಪೌರಾಣಿಕ ಪಾತ್ರಗಳನ್ನು ಪಿತೃಸಂಸ್ಕೃತಿಯ ಅಚ್ಚಿನಿಂದ ಹೊರತೆಗೆಯುವ ಪ್ರಯತ್ನಗಳು ಅನೇಕರಿಗೆ ಗಾಬರಿಯನ್ನೂ ಅಸಹನೆಯನ್ನೂ ಹುಟ್ಟಿಸುವುದು ಇದೇ ಕಾರಣಕ್ಕೆ. ಅದರಲ್ಲೂ ಯಾವ ಪಾತ್ರಗಳನ್ನು ಹೆಣ್ಣನ್ನು ಗಂಡಾಳಿಕೆಯ ಮುಂದುವರಿಕೆಗೆ ಅನುಕೂಲವಾಗುವಂತೆ ಕಟ್ಟಿ ವ್ಯಾಖ್ಯಾನಿಸಿದ್ದಾರೋ ಅಂಥ ಪಾತ್ರಗಳ ಮರು ವ್ಯಾಖ್ಯಾನವಂತೂ ಅವರಿಗೆ ಅಪಥ್ಯ.

ದೇವದತ್ತ ಪಟ್ಟನಾಯಕರ 'ಸೀತಾ' ಈ ಎಲ್ಲ ಕಾರಣಗಳಿಗಾಗಿ ಮುಖ್ಯ. ಇದನ್ನೊಂದು ಸಾಹಿತ್ಯಕ ಪಠ್ಯ ಎಂದು ನೋಡಲೇಬಾರದು. ಇದೊಂದು 'ಸಾಂಸ್ಕೃತಿಕ ಪಠ್ಯ'. ಈ ಬಗೆಯ ಪಠ್ಯಗಳನ್ನು ನಾವು 'ರಾಜಕೀಯ ಪಠ್ಯ'ಗಳಾಗಿಯೂ ನೋಡಬೇಕು. ಆಗ ಮಾತ್ರ ಈ ಪಠ್ಯಗಳ ಸರಿಯಾದ ಓದು, ಗ್ರಹಿಕೆ ಮತ್ತು ಪರಿಣಾಮಗಳು ಘಟಿಸುತ್ತವೆ. ರಾಮಾಯಣದ ನಾಯಕಿಯೂ ಭಾರತೀಯ ಸ್ತ್ರೀ ಮಾದರಿಯೂ ಆಗಿರುವ ಸೀತೆಯನ್ನು ಪಟ್ಟನಾಯಕರು ಯಾವ ಬಗೆಯ ವ್ಯಾಖ್ಯಾನಕ್ಕೆ, ತಾತ್ವಿಕತೆಗೆ ಒಗ್ಗಿಸಲು ಪ್ರಯತ್ನಿಸುತ್ತಿದ್ದಾರೆ ಎನ್ನುವ ಪ್ರಶ್ನೆಯಿಂದಲೇ ಈ ಕೃತಿಯ ಚರ್ಚೆಯನ್ನು ಆರಂಭಿಸಬಹುದು.

ಇದನ್ನು ಹೊಚ್ಚ ಹೊಸದು ಎಂದು ಹೇಳಲಾಗುವುದಿಲ್ಲ ನಿಜ; ಈ ಬಗೆಯ ಪ್ರಯತ್ನಗಳು ಎಂದಿನಿಂದಲೂ ನಡೆಯುತ್ತಲೇ ಬಂದಿವೆ. ಕುವೆಂಪು 'ಶ್ರೀ ರಾಮಾಯಣ ದರ್ಶನಂ' ದಲ್ಲಿ ಚಿತ್ರಿಸುವ ಸೀತೆ, ಪೋಲಂಕಿ ರಾಮಮೂರ್ತಿಯವರು 'ಸೀತಾಯಣ'ದಲ್ಲಿ ಎತ್ತುವ ಪ್ರಶ್ನೆಗಳು, 'ರಾಮಾಯಣ ವಿಷ ವೃಕ್ಷ' ಕೃತಿಯಲ್ಲಿ ವ್ಯಕ್ತವಾಗಿರುವ ನಿಲುವುಗಳು, ಅಸಂಖ್ಯಾತವಾದ ಜನಪದ ಕಾವ್ಯಗಳಲ್ಲಿ ಕಾಣಿಸಿಕೊಳ್ಳುವ ಗಟ್ಟಿಗಿತ್ತಿಯಾದ ಸೀತೆ... ಈ ಎಲ್ಲರಿಗಿಂತ ಭಿನ್ನವಾದ ಏನನ್ನು ಈ ಕೃತಿ ಹೇಳಲು ಹಂಬಲಿಸುತ್ತಿದೆ? ಕುವೆಂಪು ಸೀತೆಯನ್ನು ರಾಮನಿಗೆ ಸರಿದೊರೆಯಾದ ಔನ್ನತ್ಯದಲ್ಲಿ ಚಿತ್ರಿಸುತ್ತಾರೆ. ಪೋಲಂಕಿಯವರ ಕೃತಿಯು ಕೆಲವೊಮ್ಮೆ ಅತಿ ಭಾವುಕ ಅನ್ನಿಸಿದರೂ, ಅಸಾಮಾನ್ಯ ಪ್ರಯತ್ನ. ಏಕೆಂದರೆ, ಸ್ಥಾವರವಾದುದನ್ನು ಅಲ್ಲಾಡಿಸಲು ಹೆಚ್ಚಿನ ಬಲಪ್ರಯೋಗವೇ ಬೇಕು ಎನ್ನುವಂತೆ ಆ ಕೃತಿಯಲ್ಲಿ ಅವರು ಸೀತೆಯ ಪರವಾದ, ಆ ಮೂಲಕ ಮಹಿಳಾಪರ ವಕಾಲತ್ತನ್ನು ಸಮರ್ಥವಾಗಿಯೇ ಮಂಡಿಸುತ್ತಾರೆ. (ಈ ಕೃತಿಯ ಅರ್ಪಣೆಯನ್ನು ನೋಡಿದರೆ ನನ್ನ ಮಾತು ಸ್ಪಷ್ಟವಾಗುತ್ತದೆ. ಹೆಣ್ಣಿನ ಶಕ್ತಿಯನ್ನು ಗೊತ್ತಿದ್ದೂ ಅದುಮುವ ಮೃಗೀಯತೆಯನ್ನು ಮೀರುವುದು ಯಾವಾಗ ಎನ್ನುವ